**ದಿನಾಂಕ 10-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ-**

1. ನಾನು ನನ್ನ ಮನೆ ಕಟ್ಟಬೇಕಾದರೆ ಮುನಿಸಿಪಾಲಿಟಿಯವರಿಂದ ಕಟ್ಟಡ ಪರವಾನಿಗೆ ಪತ್ರ ಪಡೆದುಕೊಂಡಿದ್ದೆ. ಅದನ್ನು ಪಡೆಯಲು ಬ್ಲೂ ಪ್ರಿಂಟ್ ಮ್ಯಾಪ್ ಕೊಡಬೇಕು ಎಂದರೆ ಸರಿ.

2. ನಮ್ಮ ಕಟ್ಟಡಕ್ಕೆ ಸಂಬಂಧಿಸಿದಂತೆ ನಾನು ಸಾಲ ಪಡೆದಿದ್ದೇನೆ. ಸದರಿ ಲೋನನ್ನು ಇನ್ನೂ ಕಟ್ಟುತ್ತಿದ್ದೇವೆ. ಅದು ಡಿಸಿಬಿ ಬ್ಯಾಂಕ್ ಶ್ರೀಪುಂ ಜಂಕ್ಷನ್. ಲೋನನ್ನು ಹೆಚ್ಚುಕಡಿಮೆ 3 ವರ್ಷಗಳ ಹಿಂದೆ ಪಡೆದಿದ್ದೆ. ಸದರಿ ಕಟ್ಟಡದ ಪರವಾನಿಗೆ & ಬ್ಲೂ ಪ್ರಿಂಟ್ ಮ್ಯಾಪ್ ನನ್ನ ಬಳಿ ಇದೆ.

3. ಈ ದಾವೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ & ನೆನಪು ನನಗೆ ಇದೆ. ನಾನು ನಮ್ಮ ಕಟ್ಟಡವನ್ನು ಬ್ಲೂ ಪ್ರಿಂಟ್ ಮ್ಯಾಪ್ ಮ್ಯಾಪ್ ಪ್ರಕಾರವೇ ಕಟ್ಟಿದ್ದೆ.

4. ನನ್ನ ಕಟ್ಟಡದ ಉತ್ತರ ದಕ್ಷಿಣ-25 ಅಡಿ & ಪೂರ್ವ ಪಶ್ಚಿಮ 26 ಅಡಿ ಇದೆ. ನನ್ನ ಕಟ್ಟಡದ 4 ದಿಕ್ಕಿಗೆ ಎಷ್ಟು ಜಾಗ ಬಿಟ್ಟಿದ್ದೀರಿ ಎಂದರೆ ಸಾಕ್ಷಿಯು ಪಶ್ಚಿಮಕ್ಕೆ ಯಾವುದೇ ಜಾಗ ಬಿಟ್ಟಿಲ್ಲ ಏಕೆಂದರೆ ಅಲ್ಲಿ ನನ್ನದು ಇನ್ನೊಂದು ಪ್ಲಾಟ್ ಇದೆ. ದಕ್ಷಿಣದ ದಿಕ್ಕಿಗೆ ಯಾವುದೇ ಜಾಗ ಬಿಟ್ಟಿಲ್ಲ, ಉತ್ತರಕ್ಕೆ5 ಅಡಿ ರಸ್ತೆ ಇದೆ, ಅದನ್ನು ಅವರೇ ಬಿಟ್ಟಿರುತ್ತಾರೆ ಎನ್ನುತ್ತಾರೆ. ಪೂರ್ವಕ್ಕೆ 5 ಅಡಿ ಜಾಗ ಬಿಟ್ಟು ನಮ್ಮ ಕಟ್ಟಡ ಕಟ್ಟಿರುತ್ತೇವೆ.

5. ಸದರಿ ಕಟ್ಟಡದ ಪರವಾನಿಗೆ & ಬ್ಲೂ ಪ್ರಿಂಟ್ ಮ್ಯಾಪ್ ನ್ಯಾಯಾಲಯಕ್ಕೆ ಸಲ್ಲಿಸಲು ನನ್ನದೇನೂ ತೊಂದರೆ ಇಲ್ಲ.

6. ತಿದ್ದುಪಡಿ ಪತ್ರವನ್ನು ಚಾಲೆಂಜ್ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾವು ತಿದ್ದುಪಡಿ ಪತ್ರವನ್ನು ಯಾವುದೂ ಮಾಡಿಲ್ಲ ಎನ್ನುತ್ತಾರೆ.

7. ನನ್ನ ನಿವೇಶನದ ಉದ್ದ ಅಗಲ ಉತ್ತರ-ದಕ್ಷಿಣ 25 ಅಡಿ, ಪೂರ್ವ-ಪಶ್ಚಿಮ 25. ಸಾಕ್ಷಿಯು ಪುನಃ ನೆನಪು ಮಾಡಿಕೊಂಡು ಒಂದು ಸಲ ತಿದ್ದುಪಡಿ ಮಾಡಿಕೊಂಡಿದ್ದೆವು ಎನ್ನುತ್ತಾರೆ.

8. ಸಾಕ್ಷಿಗೆ ಒಂದು ಮ್ಯಾಪನ್ನು ತೋರಿಸಿ, ಇದರ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ಮಾಹಿತಿ ಇದೆ ಎನ್ನುತ್ತಾರೆ. ಸದರಿ ಮ್ಯಾಪಿನಲ್ಲಿ ಎ-ಬಿ ಎಂದು ಬರೆದಿದೆ, ಅದರ ನಡುವಿನ ಅಂತರ ಏನು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ಮ್ಯಾಪಿನಲ್ಲಿ ಎ-ಸಿ ಎಂದು ಬರೆದಿದೆ, ಅದರ ನಡುವಿನ ಅಂತರ ಏನು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ಮ್ಯಾಪಿನಲ್ಲಿ ಸಿ-ಡಿ ಎಂದು ಬರೆದಿದೆ, ಅದರ ನಡುವಿನ

ಅಂತರ ಏನು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ಮ್ಯಾಪಿನಲ್ಲಿ ಡಿ-ಬಿ ಎಂದು ಬರೆದಿದೆ, ಅದರ ನಡುವಿನ ಅಂತರ ಏನು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

9. ಮುನಿಸಿಪಾಲಿಟಿಯವರಿಗೆ ಈ ದಾವೆಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ಈ ದಾವೆಗೆ ಸಂಬಂಧಿಸಿದಂತೆ ಮುನಿಸಿಪಾಲಿಟಿಯವರಿಗೆ ಇದ್ದಷ್ಟು ಮಾಹಿತಿ ನಿಮಗೆ ಇಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಕಡಿಮೆಯೇ, ಜಾಸ್ತಿ ಇಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ, ನಾನು ಹೆಬ್ಬಟ್ಟಿನ ಮನುಷ್ಯ ಎನ್ನುತ್ತಾರೆ.

10. ನ್ಯಾಯಾಲಯದಿಂದ ನಮ್ಮ, ಪ್ರತಿವಾದಿಯ & ರಸ್ತೆಯ ಅಳತೆ ಮಾಡಿಸಲು ನನ್ನದೇ ತಕರಾರು ಇಲ್ಲ. ಮುಂದಿನ ಮುದ್ದತ್ತಿಗೆ ನೀವು ನಿಮ್ಮ ಕಟ್ಟಡಕ್ಕೆ ಸಂಬಂಧಿಸಿದ ಬ್ಲೂ ಪ್ರಿಂಟ್ ಮ್ಯಾಪ್ & ಪರವಾನಿಗೆ ಪತ್ರವನ್ನು ಸಲ್ಲಿಸುತ್ತೀರಾ ಎಂದರೆ ಸಾಕ್ಷಿಯು ಕೊಡುತ್ತೇನೆ ಎನ್ನುತ್ತಾರೆ.

11. ನೀವು ನಿಮ್ಮ ಪ್ಲಾಟನ್ನು ನೊಂದಣಿಮಾಡಿಸಿಕೊಳ್ಳುವ ಕಾಲಕ್ಕೆ ನಿಮ್ಮ ಪ್ಲಾಟಿಗೆ ಸಂಬಂಧಿಸಿದ ಏನೇನು ದಾಖಲೆಗಳು ಇದ್ದವು ಎಂದರೆ ಸಾಕ್ಷಿಯು ಎನ್ ಎ, ನಕ್ಷೆ, ಕಟ್ಟಡದ ಪರವಾನಿಗೆ, ಕ್ರಯಪತ್ರ ಇದ್ದವು ಎನ್ನುತ್ತಾರೆ. ಸದರಿ ಲೇಔಟ್ ಮ್ಯಾಪನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದ ಬಗ್ಗೆ ನನಗೆ ಅಷ್ಟೋಂದು ಈಗ ನೆನಪಿಲ್ಲ.

12. ಸಾಕ್ಷಿಗೆ ಕಡತದಲ್ಲಿರುವ ಅವರು ಸಲ್ಲಿಸಿದ ದಾಖಲೆಗಳನ್ನು ತೋರಿಸಿ, ಇವುಗಳಲ್ಲಿ ಲೇಔಟ್ ಮ್ಯಾಪ್ ಇಲ್ಲ ಎಂದರೆ ಸಾಕ್ಷಿಯು ಕಡತದಲ್ಲಿ ಲಗತ್ತಾಗಿರುವ ನಕಲು ವಿಭಾಗದ ಪತ್ರವನ್ನು ಅದು ನನ್ನದಲ್ಲ ಎನ್ನುತ್ತಾರೆ. ಸದರಿ ವಿಭಾಗ ಪತ್ರವನ್ನು ನಾನು ನನ್ನ ಪರವಾಗಿ ನ್ಯಾಯಾಲಯಕ್ಕೆ ಕೊಟ್ಟಿದ್ದೆ. ನಿಮ್ಮ ಮುಖಾಂತರ ನಿಶಾನೆಗೊಂದ ದಾಖಲೆಯಲ್ಲಿ ಬ್ಲೂ ಪ್ರಿಂಟ್ ಮ್ಯಾಪ್ & ಪರವಾನಿಗೆ ಪತ್ರ ಇಲ್ಲ ಎಂದರೆ ಸಾಕ್ಷಿಯು ಇಲ್ಲಿಲ್ಲ, ಮನೆಯಲ್ಲಿವೆ ಎನ್ನುತ್ತಾರೆ. ನಾನು ಮೊದಲಿದ್ದ ವಕೀಲರ ಮುಖೇನ ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೆ ಎನ್ನುತ್ತಾರೆ. ನಿಮ್ಮ ಪ್ರಕಾರ ಸದರಿ ಲೇಔಟ್ ಅಧಿಕೃತವೋ ಅಥವಾ ಅನಧೀಕೃತವಾ ಎಂದರೆ ಸಾಕ್ಷಿಯು ನನ್ನ ಮಾರಾಟಗಾರರು ನನಗೆ ಕ್ರಯಪತ್ರ ಮಾಡಿಕೊಟ್ಟಿರುವುದು ಮಾತ್ರ ಗೊತ್ತು, ಅದು ಅಧಿಕೃತವೋ ಅಥವಾ ಅನಧೀಕೃತವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇಂದಿನವರೆಗೂ ನಾನು ಸದರಿ ಲೇಔಟ್ ಅಧಿಕೃತವೋ ಅಥವಾ ಅನಧೀಕೃತವಾ ಎಂದು ತಿಳಿದುಕೊಳ್ಳುವ ಪ್ರಯತ್ನ ನಾನು ಮಾಡಿಲ್ಲ.

13. ಅನುಮೋದಿತ ಬಡಾವಣೆಯಲ್ಲಿ 30 ಅಡಿ ರಸ್ತೆ ಇದ್ದಲ್ಲಿ, ಫಾರಂ-3 ರಲ್ಲಿ 30 ಅಡಿ ರಸ್ತೆ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಪಕ್ಕಾ ಗೊತ್ತಿಲ್ಲ ಎನ್ನುತ್ತಾರೆ.

14. ನೀವು ಇಲ್ಲಿಯವರೆಗೂ ನನ್ನ ಫಾರಂ-3 ನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಪರಿಶೀಲನೆ ಮಾಡಲು ಏನು ಇದೆ, ಆದರೆ ನೋಡಿರುತ್ತೇನೆ ಎನ್ನುತ್ತಾರೆ. ನೀವು ಇಲ್ಲಿಯವರೆಗೂ ನನ್ನ ಫಾರಂ-3 ರಲ್ಲಿ ಏನೇನು ಬರೆದಿದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ, ಏನೇನು ಬರೆದಿದ್ದಾರೆ ಗೊತ್ತಿಲ್ಲ ಎನ್ನುತ್ತಾರೆ. ಅಂದರೆ ನಿಮ್ಮ ಫಾರಂ-3 ರಲ್ಲಿ ಏನೇನು ಬರೆದಿದೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

15. ಅನಧೀಕೃತ ಬಡಾವಣೆಯಲ್ಲಿ 30 ಅಡಿ ರಸ್ತೆ ಇದ್ದರೂ ಸಹ ಕೇವಲ ದಾರಿ ಎಂದು ಮಾತ್ರ ತೋರಿಸುತ್ತಾರೆ ಎಂದರೆ ಸಾಕ್ಷಿಯು 20 ಅಡಿ ಇದ್ದರೆ, 20 ಅಡಿ, 30 ಇದ್ದರೆ 30 ಅಡಿ ಎಂದು ತೋರಿಸುತ್ತಾರೆ ಎನ್ನುತ್ತಾರೆ. ನಿಮ್ಮ ಫಾರಂ-3 ರಲ್ಲಿ ಪೂರ್ವಕ್ಕೆ ಎಷ್ಟು ಅಡಿ ರಸ್ತೆ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಓದಿಲ್ಲ, ಆದ್ದರಿಂದ ಗೊತ್ತಾಗುವುದಿಲ್ಲ ಎನ್ನುತ್ತಾರೆ.

16. ನಿಮ್ಮ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ನಾನು ಇಲ್ಲಿಯವರೆಗೆ ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ನಿಮಗೆ ಮುಖ್ಯವಿಚಾರಣೆಯ ಪ್ರಮಾಣ ಪತ್ರ ಎಂದರೆ ಗೊತ್ತೇ ಎಂದರೆ ಸಾಕ್ಷಿಯು ಇಲ್ಲ ನನಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ.

17. ನಿಮ್ಮ ಪ್ರಕಾರ ನೀವು ಕಟ್ಟಿದ ಕಟ್ಟಡ ಕಾನೂನು ಬದ್ಧವಾಗಿದೆಯೇ ಎಂದರೆ ಹೌದು ಎನ್ನುತ್ತಾರೆ.

18. ಪ್ರತಿವಾದಿಗಳ ಆಸ್ತಿಗೆ ಸಂಬಂಧಿಸಿದಂತೆ ನೀವು ಇಲ್ಲಿಯವರೆಗೆ ಯಾವ ಯಾವ ದಾಖಲೆಗಳನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿಯು ಅವರ ಪತ್ರಗಳನ್ನು ನಾನು ಹೇಗೆ ಪರಿಶೀಲನೆ ಮಾಡಲಿ ಎನ್ನುತ್ತಾರೆ. ನಿಮ್ಮ & ಅವರ ಹಾಗೂ ಮುನಿಸಿಪಾಲಿಟಿಯವರ ದಾಖಲೆಗಳನ್ನ ಪರಿಶೀಲಿಸಿದರೆ ಮಾತ್ರ ಸತ್ಯ ತಿಳಿಯುತ್ತದೆ ಎಂದರೆ ಸರಿ.

19. ಈ ದಾವೆಯಲ್ಲಿ ಇಲ್ಲಿಯವರೆಗೆ ವೀಡಿಯೋ & ಫೋಟೋಗಳನ್ನು ಹಾಕಿಲ್ಲ ಎಂದರೆ ಸಾಕ್ಷಿಯು ಫೋಟೋಗಳನ್ನು ಹಾಕಿರುತ್ತೇನೆಂದು ನುಡಿದು ನಂತರದಲ್ಲಿ ಮೊದಲಿನ ಕೇಸಿನಲ್ಲಿ ಹಾಕಿದ್ದೆ, ಈ ಕೇಸಿನಲ್ಲಿ ಹಾಕಿಲ್ಲ ಎನ್ನುತ್ತಾರೆ.

20. ಈ ದಾವೆಯಲ್ಲಿ ಮುನಿಸಿಪಾಲಿಟಿಯವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರನ್ನು ಪಾರ್ಟಿಯನ್ನಾಗಿ ಮಾಡಿದರೆ ಮಾತ್ರ ಸತ್ಯಾಂಶ ಹೊರಗಡೆ ಬರುತ್ತದೆ ಎಂದರೆ ಸರಿ. ಈ ದಾವೆ ಹಾಕುವ ಮುಂಚೆ ಮುನಿಸಿಪಾಲಿಟಿಯವರಿಗೆ ತಕರಾರು ಅರ್ಜಿ ಕೊಟ್ಟಿದ್ದೆ. ಸದರಿ ಅರ್ಜಿಯನ್ನು ಈ ದಾವೆಯಲ್ಲಿ ಸಲ್ಲಿಸಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

ಪಿಡಬ್ಲ್ಯೂ: 1 ಅಸಲು ದಾವೆ ನಂ.558/2021

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.